ಆ) ಸಕಲೇಶಪುರ ಮತ್ತು ಆಲೂರು ಕ್ಷೇತ್ರಗಳಲ್ಲಿ 51 ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿವೆ. ವಿವರಗಳು ಕೆಳಗಿನಂತಿವೆ.

ತಾಲ್ಲೂಕು	ಎನ್.ಆರ್.ಡಬ್ಲ್ಯೂ.ಎಸ್.		ಎ.ಆರ್.ಡಬ್ಲ್ಯೂ.ಡಬ್ಲ್ಯೂ.ಎಸ್.	
	ನಲ್ಲಿ ನೀರು ಸರಬರಾಜು ಯೋಜನೆ		ನಲ್ಲಿ ನೀರು ಸರಬರಾಜು ಯೋಜನೆ	
	ಮುಗಿದಿರುವುವು	ಚಾಲ್ತಿಯಲ್ಲಿರುವುವು	ಮುಗಿದಿರುವುವು	ಚಾಲ್ತಿಯಲ್ಲಿರುವುವು
ಸಕಲೇಪುರ	10	-	7	1
ಆಲೂರು	17	6	17	7
ಒಟ್ಟು	27	6	24	8

ಆ) ಉಳಿದ 37 ಯೋಜನೆಗಳನ್ನು ಹಂತಹಂತವಾಗಿ ಮಾರ್ಚ್ 1998ರ ಅಂತ್ಯದೊಳಗೆ ಮುಗಿಸಲು ಯೋಜಿಸಲಾಗಿದೆ.

ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸುವುದು

539 - ಶ್ರೀ ಬಿ.ಬಿ. ಶಿವಪ್ಪ (ಸಕಲೇಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಟ್ಟ ಕೆಲವು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ, ಸಕಲೇಪುರ ಕ್ಷೇತ್ರಕ್ಕೊಳಪಟ್ಟ (ಸಕಲೇಪುರ-ಆಲೂರು) ಯಾವ ಯಾವ ರಸ್ತೆ ವರ್ಗಾಯಿಸುವಂತೆ ನಿರ್ಧರಿಸಲಾಗಿದೆ (ಕಿಲೋ ಮೀಟರ್‌ವಾರು ವಿವರ ನೀಡುವುದು)

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಆಲೋಚಿಸುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಈ ಬಗ್ಗೆ ಪರಿಶೀಲಿಸಲಾಗುವುದು

ಸಕಲೇಪುರ - ಆಲೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

541 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಪುರ-ಆಲೂರು ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಕುಡಿಯುವ ನೀರಿನ ಯೋಜನೆಗಳೆಷ್ಟು (ಎನ್‌ಆರ್‌ಡಬ್ಲ್ಯೂಎಸ್ ಹಾಗೂ ಮಿನಿವಾಟರ್ ಸಪ್ಲೈ ತಾಲ್ಲೂಕುವಾರು ವಿವರ ನೀಡುವುದು)

ಆ) ಆ ವೈಕಿ ಪೂರ್ಣಗೊಂಡ ಕಾಮಗಾರಿಗಳೆಷ್ಟು ಹಾಗೂ ಪೂರ್ಣಗೊಂಡು ವಿದ್ಯುಚ್ಛಕ್ತಿ ಸರಬರಾಜು ಇಲ್ಲದೆ ಇರುವ ಕಾಮಗಾರಿಗಳೆಷ್ಟು?

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಧಿ ನಿಗಧಿ ಮಾಡಲಾಗಿದೆಯೇ?